1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

<u>ಸಿ.ಸಿ.ಸಂಖ್ಯೆ:858/2024</u>

ಪಿರ್ಯಾದಿ : ಬಿಳಿಗೆರೆ ಪೊಲೀಸರು

ವಿರುದ್ಧ

ಆರೋಪಿ :
1 ಪುನೀತ್ ಎನ್ ಎನ್ ಬಿನ್ ನಾಗರಾಜು 27 ವರ್ಷ
2 ನಾಗರಾಜು ಬಿನ್ ಲೇಟ್ ಮಾದಯ್ಯ 63 ವರ್ಷ
3 ನಿರಂಜನ್ ಬಿನ್ ನಾಗರಾಜು 30 ವರ್ಷ
4 ಮನು ಬಿನ್ ಲೇಟ್ ಮಾದಯ್ಯ 54 ವರ್ಷ
5 ಜಯಮ್ಮ ಬಿನ್ ನಾಗರಾಜು 53 ವರ್ಷ

ಎಲ್ಲರ ವಾಸಃ ನಗರ್ಲೆ ಗ್ರಾಮ, ನಂಜನಗೂಡು ತಾ.

<u>ದೋಷಾರೋಪಣೆ</u>

ಶ್ರೀಮತಿ.ಸರಿತಾ ಕುಮಾರಿ.ಎ.ಎಂ, ಬಿ.ಎ.,ಎಲ್.ಎಲ್.ಬಿ., 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:-

ದಿನಾಂಕ: 13.01.2024 ರಂದು ಸಂಜೆ 07:30 ಗಂಟೆಯಲ್ಲಿ ನಂಜನಗೂಡು ತಾಲೂಕು, ಬಿಳಿಗೆರೆ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ನಗರ್ಲೆ ಗ್ರಾಮದ ಪರಿಶಿಷ್ಟರ ಬೀದಿಯಲ್ಲಿ ಚಾಸಾ.2 ರವರು ತಮ್ಮ ಮನೆಯಲ್ಲಿದ್ದಾಗ, 1ನೇ ಆರೋಪಿತರಾದ ನೀವು ಚಾಸಾ.2 ರವರ ಮನೆಯ ಬಳಿ ಬಂದು, ಚಾಸಾ.1 ರವರನ್ನು ಅವಾಚ್ಯ ಶಬ್ದಗಳಿಂದ ಬೈದು ಉದ್ರೇಕವನ್ನುಂಟು ಮಾಡಿದರೆ ಅಂತಹ ಉದ್ರೇಕದಿಂದ ಶಾಂತಿ ಭಂಗ ಮಾಡಲಿ ಅಥವಾ ಇತರೆ ಯಾವುದೇ ಅಪರಾಧ ಮಾಡಲಿ ಎನ್ನುವ ಉದ್ದೇಶದಿಂದ ಅವರನ್ನು ಅವಮಾನಿಸಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.504 ಸಹವಾಚಕ ಕಲಂ.34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೆಯದಾಗಿ , ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಆ ಪೈಕಿ 1 ನೇ ಆರೋಪಿತರಾದ ನೀವು ಜಗಳದ ಬಗ್ಗೆ ಕೇಳಲು ಬಂದ ಚಾಸಾ.2 ರವರಿಗೆ ಕಪಾಲಕ್ಕೆ ಹೊಡೆದಿರುತ್ತೀರಿ ಮತ್ತು 4 ನೇ ಆರೋಪಿತರಾದ ನೀವು ಚಾಸಾ.2 ರವರಿಗೆ ಕಾಲಿನಿಂದ ಒದ್ದು ಕೆಳಕ್ಕೆ ಕಡವಿ ತುಳಿದು ಎದೆಗೆ ಮತ್ತು ಬಲಭಾಗದ ತೋಳಿಗೆ ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.323 ಸಹವಾಚಕ ಕಲಂ.34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೂರನೆಯದಾಗಿ , ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಗಲಾಟೆಯ ವಿಚಾರವನ್ನು 1 ನೇ ಆರೋಪಿಯ ಬಳಿ ಕೇಳಲು ಚಾಸಾ.1 ರವರು ಚಾಸಾ.2 ರವರನ್ನು ಜೊತೆಯಲ್ಲಿ ಕರೆದುಕೊಂಡು ಆರೋಪಿತರಾದ ನಿಮ್ಮ ಮನೆಯ ಬಳಿ ಹೋಗಿ ರಸ್ತೆಯಲ್ಲಿ ನಿಂತು ಕೇಳಿದಾಗ ಆರೋಪಿತರಾದ ನೀವು ಮನೆಯಿಂದ ಹೊರಗೆ ಬಂದು, 2 ನೇ ಆರೋಪಿತರಾದ ನೀವು ಚಾಸಾ.1 ರವರ ಬಲ ಕೈಗೆ ದೊಣ್ಣೆಯಿಂದ ಹೊಡೆದು ಬಿಸಾಕಿದ್ದು, ಅದೇ ದೊಣ್ಣೆಯಿಂದ 3 ನೇ ಆರೋಪಿತರಾದ ನೀವು ಚಾಸಾ.1 ರವರ ಎಡಕೈಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.324 ಸಹವಾಚಕ ಕಲಂ.34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ನಾಲ್ಕನೆಯದಾಗಿ , ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಆ ಪೈಕಿ 1 ಮತ್ತು 5 ನೇ ಆರೋಪಿತರಾದ ನೀವು ಉಳಿದ ಆರೋಪಿಗಳಿಗೆ ಇವರನ್ನು ಬಿಡಬೇಡಿ ಹೊಡೆದು ಸಾಯಿಸಿ ಎಂದು ಕುಮ್ಮಕ್ಕು ನೀಡಿ, ಅಪರಾಧವನ್ನು ಎಸಗಲು ಕುಮ್ಮಕ್ಕು ನೀಡಿದ ಮಾಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ.114 ಸಹವಾಚಕ ಕಲಂ.34 ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೆಯದಾಗಿ , ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಆರೋಪಿತರಾದ ನೀವು ಚಾಸಾ.1 ಮತ್ತು 2 ಕೊಲೆ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆಯನ್ನು ಎಸಗಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.506 ಸಹವಾಚಕ ಕಲಂ.34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

(ಮೇಲ್ಕಂಡ ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಕೇಳಲಾಯಿತು. ಆರೋಪಿ ಕೊಟ್ಟ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನು ಒಳಗೊಂಡಿದೆ ಎಂದು ದಿನಾಂಕ 03.12.2025 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸಿರುತ್ತೇನೆ.)

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನಂಜನಗೂಡು

**ಸಿ.ಸಿ.ಸಂಖ್ಯೆ:858/2024**

ಪಿರ್ಯಾದಿ : ಬಿಳಿಗೆರೆ ಪೊಲೀಸರು

ವಿರುದ್ಧ

ಆರೋಪಿ :
1 ಪುನೀತ್ ಎನ್ ಎನ್ ಬಿನ್ ನಾಗರಾಜು 27 ವರ್ಷ
2 ನಾಗರಾಜು ಬಿನ್ ಲೇಟ್ ಮಾದಯ್ಯ 63 ವರ್ಷ
3 ನಿರಂಜನ್ ಬಿನ್ ನಾಗರಾಜು 30 ವರ್ಷ
4 ಮನು ಬಿನ್ ಲೇಟ್ ಮಾದಯ್ಯ 54 ವರ್ಷ
5 ಜಯಮ್ಮ ಬಿನ್ ನಾಗರಾಜು 53 ವರ್ಷ
ಎಲ್ಲರ ವಾಸ: ನಗರ್ಲೆ ಗ್ರಾಮ, ನಂಜನಗೂಡು ತಾ.

: ಆಪಾದನೆ :

ಪ್ರಶ್ನೆ:1– ಈ ಮೇಲೆ ಹೇಳಿದಂತೆ ನಿಮಗೆ ಓದಿ ಹೇಳಿ ವಿವರಿಸಿದ ಆಪಾದನೆಯನ್ನು ಅರ್ಥಮಾಡಿಕೊಂಡಿರುವಿರಾ?

1 ನೇ ಆರೋಪಿ ಉತ್ತರ:

2 ನೇ ಆರೋಪಿ ಉತ್ತರ:

3 ನೇ ಆರೋಪಿ ಉತ್ತರ:

4 ನೇ ಆರೋಪಿ ಉತ್ತರ:

5 ನೇ ಆರೋಪಿ ಉತ್ತರ:

ಪ್ರಶ್ನೆ:2– ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೋ?

1 ನೇ ಆರೋಪಿ ಉತ್ತರ:

2 ನೇ ಆರೋಪಿ ಉತ್ತರ:

3 ನೇ ಆರೋಪಿ ಉತ್ತರ:

4 ನೇ ಆರೋಪಿ ಉತ್ತರ:

**5 ನೇ ಆರೋಪಿ ಉತ್ತರಃ**

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸಲಾಗಿದೆ.

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
**ನಂಜನಗೂಡು**